ತೋಟಗಾರಿಕಾ ಕ್ಷೇತ್ರ ಒತ್ತುವರಿ.

867 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕಿನ ದೊಡ್ಡೇರಿ ಹೋಬಳಿಯಲ್ಲಿನ ಇಂದಿರಾ ತೋಟಗಾರಿಕೆ ಕ್ಷೇತ್ರದ ಒಟ್ಟು ವಿಸ್ತೀರ್ಣ ಎಷ್ಟು?

ಆ) ಒಟ್ಟು ವಿಸ್ತೀರ್ಣ ಶೇಕಡ75 ಭಾಗದ ಪ್ರದೇಶವನ್ನು ಅನಧಿಕೃತವಾಗಿ ಆಕ್ರಮಿಸಿ ಸಾಗುವಳಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಅನಧಿಕೃತವಾಗಿ ಆಕ್ರಮಿಸಿರುವವರನ್ನು ತೆರವುಗೊಳಿಸಲು ಸರ್ಕಾರ ಕೂಡಲೇ ಕ್ರಮವನ್ನು ತೆಗೆದುಕೊಂಡು ಸ್ವಾಧೀನಕ್ಕೆ ತೆಗೆದುಕೊಳ್ಳುವುದೇ?

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ದೊಡ್ಡೇರಿ ಹೋಬಳಿಯ ಇಂದಿರಾ ತೋಟಗಾರಿಕೆ ಕ್ಷೇತ್ರದ ಒಟ್ಟು ವಿಸ್ತೀರ್ಣ 223 ಏಕರೆ ಇದೆ.

ಆ) ಇಲ್ಲ. ಒತ್ತುವರಿ ಆಗಿರುವುದಿಲ್ಲ.

ಇ) -ಉದ್ಭವಿಸುವುದಿಲ್ಲ-

ರೈತ ಸಂಜೀವಿನಿ ವಿಮಾ ಯೋಜನೆ ಬಗ್ಗೆ.

881 - ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರೈತ ಸಂಜೀವಿನಿ ಅಪಘಾತ ವಿಮಾ ಯೋಜನೆ ಜಾರಿಯಲ್ಲಿ ಇದೆಯೇ?

ಆ) ಈ ಯೋಜನೆಯಡಿಯಲ್ಲಿ ಎಷ್ಟು ಜನ ರೈತರಿಗೆ ವಿಮೆ ನೀಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)?

ಶ್ರೀ. ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು) :

ಅ) ಹೌದು.

ಆ) 170 ರೈತರಿಗೆ. ಜಿಲ್ಲಾವಾರು ಮಾಹಿತಿಗಳು ಈ ಕೆಳಕಂಡಂತಿದೆ.

ಜಿಲ್ಲೆಯ ಹೆಸರು		ಮಂಜೂರಾದ ವಿಮಾ ಅರ್ಜಿಗಳ ಸಂಖ್ಯೆ
ಬೆಂಗಳೂರು ವಿಭಾಗ		
ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆ	-	9
ಚಿತ್ರದುರ್ಗ ಜಿಲ್ಲೆ	-	10
ಕೋಲಾರ ಜಿಲ್ಲೆ	-	10
ಶಿವಮೊಗ್ಗ ಜಿಲ್ಲೆ	-	6
ತುಮಕೂರು ಜಿಲ್ಲೆ	-	11
ಮೈಸೂರು ವಿಭಾಗ		
ಕೊಡಗು ಜಿಲ್ಲೆ	-	0
ಮಂಡ್ಯ ಜಿಲ್ಲೆ	-	8
ದಕ್ಷಿಣ ಕನ್ನಡ ಜಿಲ್ಲೆ	-	9
ಚಿಕ್ಕಮಗಳೂರು ಜಿಲ್ಲೆ	-	7
ಮೈಸೂರು ಜಿಲ್ಲೆ	-	4
ಹಾಸನ ಜಿಲ್ಲೆ	-	4
ಬೆಳಗಾವಿ ವಿಭಾಗ		
ಬೆಳಗಾವಿ ಜಿಲ್ಲೆ	-	17
ಬಿಜಾಪುರ ಜಿಲ್ಲೆ	-	22
ಧಾರವಾಡ ಜಿಲ್ಲೆ	-	13
ಉತ್ತರ ಕನ್ನಡ ಜಿಲ್ಲೆ	-	11
ಗುಲ್ಬರ್ಗಾ ವಿಭಾಗ		
ಬಳ್ಳಾರಿ ಜಿಲ್ಲೆ	-	1
ಬೀದರ್ ಜಿಲ್ಲೆ	-	10
ಗುಲ್ಬರ್ಗಾ ಜಿಲ್ಲೆ	-	0
ರಾಯಚೂರು ಜಿಲ್ಲೆ	-	18